"ಇಲ್ನೋಡೇ ಅವ ಹೋಗುವಾಗ ಈ ಟೇಬಲ್ಲಿಗೆ ಆ ಕಡೆಯಿಂದ ಹಾಯ್ದು ಅಂತಿಟ್ಕೋ, ಆಗ ಈ ಬಳೆಸ್ಟ್ಯಾಂಡು ಈ ಕಡೆ ಸರಿದು ಕೆಳಕ್ಕೆ ಬಿದ್ದು ಒಡೀತು. ಸರಿ, ಆದರೆ ಪ್ರಶ್ನೆ ಏನಪ್ಪಾ ಅಂದರೆ ಅದರೊಟ್ಟಿಗೇ ಬಿದ್ದಿದ್ದ ಗಾಜಿನ ಹೂ ಕುಂಡ ಅದ್ಯಾಗೆ ಒಡೆದಿಲ್ಲ ಅಂತ?" ಅತ್ತೆ ಒಳ್ಳೆ ಡಿಟೆಕ್ಟಿವ್ ಪ್ರದ್ಯುಮ್ನನಂತೆ ಕೈ ಬಾಯಿ ತಿರುಗಿಸಿ ಪೋಸು ಕೊಟ್ಟಾಗ ತಟ್ಟನೆ ನಗು ಬಂತು.

''ಅಯ್ಯೋ ಬಿಡಿ ಅತ್ತೆ, ನಾಜೂಕಾಗಿರೋದು ಒಡೆಯುತ್ತೆ. ಹೂಕುಂಡ ಗಟ್ಟಿಯಾಗಿರ್ಬೇಕು. ನಾನದೆಲ್ಲ ನೋಡ್ಕೋತೀನಿ, ನೀವು ಬನ್ನಿ ಕಾಫಿ ಕುಡೀರಿ'' ಅಂತ ಕೋಣೆಗೆ ಕರೆದೊಯ್ದು ಕೂಡಿಸಿ ಬಂದು ಗಾಜಿನ ಚೂರು ಹೆಕ್ಕತೊಡಗಿದಳು.

ಹಸಿರು ಕೆಂಪು ಹಳದಿ ಹೀಗೆ ಒಂಬತ್ತು ಬಣ್ಣಗಳ ಕೆತ್ತನೆ ಕೆಲಸದ ಬಳೆಗಳ ಸೆಟ್ಟು, ಅವಿನಾಶ ಕಾನ್ಫರೆನ್ಸ್‌ಗೆ ಕೊಲ್ಕತ್ತಾಗೆ ಹೋದಾಗ ತಂದದ್ದು. "ಚೆನ್ನಾಗೇನೋ ಇದೆ ಆದರೆ ಕಲರ್ಸು ತುಂಬಾ ಗಾಡಿ, ಬಳೆಗಳು ಒಂಚೂರು ದಪ್ಪ" ಅಂತ ಮೂಗೆಳೆದು ಸ್ಟ್ಯಾಂಡಿಗೇರಿಸಿದ್ದು ಮರಳಿ ತೆಗೆದು ನೋಡಿರಲಿಲ್ಲ. ಅವನೆಂದೂ, "ಯಾಕೆ ಹಾಕಿಲ್ಲ?" ಅಂತ ಕೇಳಿರಲೂ ಇಲ್ಲ. ಹೀಗೆ, "ನಿಂಗೆ ಇದು" ಅಂತ ಬರಿದೇ ಪೊಟ್ಟಣ ತಂದಿಡುವ ಬದಲು ತಾನೇ ಎದುರು ಕೂಡಿಸಿಕೊಂಡು, "ನೋವಾಗುತ್ತಾ ನನ್ನ ಮರಿಗೆ?'' ಅಂತ ಕೇಳುತ್ತಾ ಮೆತ್ತಗೆ ಮುಂಗೈ ಒತ್ತಿ ಒತ್ತಿ ಒಂದೊಂದೇ ಬಳೆಯೇರಿಸಿದ್ದರೆ! ''ಹಾ...'' ಪಟ್ಟನೆ ಕೈಯೆಳೆದುಕೊಂಡಳು. ಅಂಗೈಗೆ ಸಿಕ್ಕಿದ್ದ ಪುಟ್ಟ ಬಳೆಚೂರನ್ನೆಳೆದರೆ ಸಣ್ಣಗೆ ರಕ್ತ. ಸಿಂಕಿನಲ್ಲಿ ಕೈ ತೊಳೆದುಕೊಳ್ಳುವಾಗ ನೀರಿನೊಟ್ಟಿಗೇ ಹರಿದ ಕೆಂಪು ಬಣ್ಣ ನೋಡುತ್ತಾ ಮತ್ತೆ ನಿಖಿಲ ನೆನಪಾಗಿದ್ದ. ಅದೆಂಥ ರಂಗುರಂಗಿನ ವ್ಯಕ್ತಿತ್ವ ಅವಂದು. ಒಮ್ಮೆ ಕೇಳಿದ್ದ, "ಮೇಡಂ ನಿಮ್ಗೆ ಜೀವಿಕಾ ಅಂತ ಹೆಸರಿಟ್ಟವರಾರು?"

"ನಮ್ಮಮ್ಮ. ಯಾಕೆ ಚೆನ್ನಾಗಿಲ್ವಾ?"

"ನಿಮಗದರ ಅರ್ಥ ಗೊತ್ತಾ?" ಆಶ್ಚರ್ಯವೆಂದರೆ ಅವಳೆಂದೂ ಅರ್ಥಕ್ಕಾಗಿ ತಲೆ ಕೆಡಿಸಿಕೊಂಡಿರಲೇ ಇಲ್ಲ, ಅಮ್ಮನನ್ನು ಕೇಳಿರಲೂ ಇಲ್ಲ. ಯಾರೋ ಗೆಳತಿಯರು ಒಂದಿಬ್ಬರು, ''ಇದೇನೆ ವಿಚಿತ್ರ ಹೆಸರು'' ಅಂತ ಕಮೆಂಟ್ ಮಾಡಿದ್ರೆ, ''ಇಟ್ಟೋರನ್ನೇ ಕೇಳ್ರೇ'' ಅಂತ ಹಾರಿಸಿದ್ದಳು.

"ಜೀವಿಕಾ ಅಂದ್ರೆ ಜೀವದ ಆಧಾರ, ಚೈತನ್ಯ ಅಂತರ್ಥ. ಅಲ್ದೆ ನೀರು ಅಂತ ಕೂಡಾ ಅರ್ಥವಿದೆ. ರಭಸದಿಂದ ಉಕ್ಕುಕ್ಕಿ ಹರಿವ ನೀರಿನ ಚೆಲುವೂ ಇದೆ, ಗತಿಯ ಜೀವಂತಿಕೆಯೂ ಇದೆ ನಿಮ್ಮಲ್ಲಿ" ಅಂದಿದ್ದ. "ಕಂಪ್ಯೂಟರ್ ಮುಂದೆ ಕೂತು ಕೂತು ಯಂತ್ರವಾಗಿಲ್ಲವಲ್ಲ ನಿಮ್ಮ ಕವಿಹೃದಯ, ಅದೇ ಖುಷಿ" ಅಂತ ನಕ್ಕಿದ್ದಳು.

"ಮೇಡಂ ಚೆಲುವು ಕಂಡಿತೋ ಕವಿಯಾಗುತ್ತೆ ಇದು" ಅಂತ ಎದೆ ತಟ್ಟಿಕೊಂಡಿದ್ದನಲ್ಲವೆ? ಯಾಕೋ ಕಂಡ ಕಂಡವರಿಗೆಲ್ಲ ಹೇಳಿ ಹಳತಾದ ಮಾತಿದು ಅಂತ ಆ ಗಳಿಗೆಗೆ ಅನ್ನಿಸಿತ್ತು, ಪರೀಕ್ಷಿಸುವಂತೆ ಅವನ ಕಣ್ಣು ದಿಟ್ಟಿಸಿದರೆ ಅಲ್ಲಿ ಕಂಡಿದ್ದು ಹೊಗಳಿಕೆಗೆ ಹಸಿದ ನನ್ನದೇ ಆರ್ತ ಬಿಂಬವೇ ಹೊರತು ಮತ್ತೇನಿಲ್ಲ. ಅದರಾಚೆ ಏನಿದೆಯೋ ಗೊತ್ತಾಗೋದು ಹೇಗೆ? ಯಾಕೋ ವಿಚಾರಗಳ ತಾಕಲಾಟಕ್ಕೆ ತಲೆ ಸಿಡಿಯುವಂತಾಯ್ತು.

ಸುಮ್ಮನೆ ಹಿತ್ತಲಿಗೆ ಬಂದು ತೋಟದಲ್ಲಿ ನಿಂತಳು. ಕಮಾನಿನ ಮೇಲೆ ಹಬ್ಬಿದ್ದ ನಿತ್ಯಮಲ್ಲಿಗೆ ರಾಶಿ ರಾಶಿಯಾಗಿ ಬಿದ್ದು ತೂಗುಮಂಚ ಹೂವಿನ ಪಲ್ಲಕ್ಕಿಯಾಗಿದೆ! ರಸ್ತೆಯ ಮಿಣುಕು ದೀಪಕ್ಕೆ ಚಾಚಿದ ಗಿಡಗಳ ನೆರಳುಗಳು ಕಂಪೌಂಡು ಗೋಡೆಗೆ ಹಾಯ್ದು ತುಂಡಾಗುತ್ತಿವೆ. ಮಾಸಲು ಬೆಳಕಲ್ಲಿ ಬಣ್ಣ ಕಳಕೊಂಡು ಫೋಟೊ ನೆಗೆಟಿವ್‌ಗಳಂತೆ ನಿಂತಿವೆ ಮಲ್ಲಿಗೆ ಬಳ್ಳಿಗಳು. ಗಾಳಿ ಬೀಸಿತಂದ ಕಂಪಿಂದಲೇ, 'ಹಾ ಇದು ಜಾಜೀದು, ಇದು ದುಂಡುಮಲ್ಲಿಗೆ ಅನ್ನಿಸುತ್ತೆ' ಅಂತ ಅಂದಾಜು ಮಾಡ್ತಾ ಮಂಚದ ತುದಿಗೆ ಕೂತು ತೂಗಿಕೊಂಡಳು. ಮನಸ್ಸು ತುಸು ಹಗುರಾಯಿತು. ಅವಿಗೆ ಅದೇನು ತೋಟದ

